**ಸಾಕ್ಷಿ ಯನ್ನು ದಿನಾಂಕ: 16-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ :- ವಾದಿ ಪರ ವಕೀಲರಿಂದಃ**

ನಮೂನೆ - 12 ನ್ನು ನಿಪಿ-37 ಎಂದು, Assessment and Demand Register Extract ಗಳನ್ನು ನಿಪಿ-38 ರಿಂದ 40 ಎಂದು, ಇ-ಖಾತಾ ಎಕ್ಷ್ಟ್ರಾಕ್ಟ ನ್ನು ನಿಪಿ-41 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲು :- 19 ರಿಂದ 21 ನೇ ಪ್ರತಿವಾದಿಗಳ ಪರ ವಕೀಲರಿಂದಃ**

ಮೇಲೆ ಹೇಳಿದ ದಾಖಲೆಗಳನ್ನು ನಾನು ಇತ್ತೀಚಿಗೆ ಪಂಚಾಯಿತಿಯಿಂದ ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಗಳು ಮುನಿಯಪ್ಪ, ಕಾಳಪ್ಪ, ತಿಮ್ಮಯ್ಯ ಮತ್ತು ಹನುಮಪ್ಪ ರವರ ಹೆಸರಿನಲ್ಲಿತ್ತು. ಯಾವ ಆಧಾರದ ಮೇಲೆ ಆ ವ್ಯಕ್ತಿಗಳಿಗೆ ಯಾವ ದಿನಾಂಕದಲ್ಲಿ ಖಾತೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮೂಲತಃ ಸದರಿ ಸ್ವತ್ತು ನಮ್ಮ ತಾತ ಮುನಿಯಪ್ಪನವರಿಗೆ ಸೇರಿತ್ತು. ತದನಂತರ ವಿಭಾಗಗಳಾಗಿ ಬೇರೆಯವರು ಖಾತೆ ಮಾಡಿಕೊಂಡಿರುತ್ತಾರೆ. ಯಾವ ವರ್ಷ ವಿಭಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ವಾದಿಗಳ ಹೆಸರಿನಲ್ಲಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ತಾತನ ಹೆಸರು ಕಂಡು ಬರುತ್ತದೆ ಎಂದು ಹೇಳುತ್ತಾರೆ. ನಾನು ಹಾಜರು ಮಾಡಿರುವ ದಾಖಲೆಗಳು ಈ ದಾವೆಯ ದಾವಾ ಆಸ್ತಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**